ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.

ಸಿಸಿ ನಂಬರ್ **987 /2023**

| | | |
|---|---|---|
| ಸಾಕ್ಷಿಯ ಹೆಸರು | : ಅಭಿಜಿತ್ | ಸಿ.ಡಬ್ಲ್ಯು 10 |
| ತಂದೆಯ ಹೆಸರು | : ಮಂಜಪ್ಪ | ಪಿ.ಡಬ್ಲ್ಯು 3 |
| ವಯಸ್ಸು | : 30 ವರ್ಷ | |
| ಉದ್ಯೋಗ | : ಖಾಸಗಿ ಕೆಲಸ | |
| ವಾಸ ಸ್ಥಳ | : ಹುಣಸಘಟ್ಟ | |

ದಿನಾಂಕಃ**03-12-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

ಚಾಸಾ-1 ರಿಂದ 8 ಮತ್ತು 9 ರವರ ಪರಿಚಯ ಇರುತ್ತದೆ. ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯ ಸಹಿ ಇರುವ ದಾಖಲೆ ಸ್ಥಳ ಪಂಚನಾಮೆ ಆಗಿದ್ದು ಅದನ್ನು ಈಗಾಗಲೇ ನಿ.ಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-2(ಬಿ) ಎಂದು ಗುರುತಿಸಲಾಗಿದೆ. ಅಪಘಾತದ ಕುರಿತು ಪಂಚನಾಮೆಗೆ ನಾನು ಸಹಿ ಹಾಕಿದ್ದೇನೆ. ಅಲ್ಲಿ ಶ್ರೀನಿವಾಸ್ ಎಂಬ ವ್ಯಕ್ತಿ ತೀರಿಕೊಂಡಿದ್ದರು. ಸ್ಥಳವನ್ನು ನನಗೆ ಚಾಸಾ-1 ರವರು ತೋರಿಸಿದರು. ನನ್ನ ಜೊತೆ ಪಂಚನಾಮೆಗೆ ಮತ್ತೆ ಯಾರ್ಯಾರು ಸಹಿ ಮಾಡಿದ್ದಾರೆ ಎಂದು ಕೂಡ ನೆನಪಿಲ್ಲ. ಸಾಕ್ಷಿಯು ನಿ.ಪಿ-3 ಫೋಟೋದಲ್ಲಿ ತಾವು ಇರುವುದಾಗಿ ಗುರುತಿಸುತ್ತಾರೆ. ಅದನ್ನು ಅಪಘತದ ಸ್ಥಳದಲ್ಲಿ ತೆಗೆಯಲಾಗಿದೆ. ನನ್ನ ಜೊತೆ ಫೋಟೋದಲ್ಲಿ ಚಾಸಾ-1 ಮತ್ತು 9 ಕೂಡ ಇರುತ್ತಾರೆ. ಲಾರಿಯಿಂದ ಅಪಘಾತ ಆಯಿತು ಎಂದು ನನಗೆ ಗೊತ್ತಾಯಿತು.

ಪಾಟೀ ಸವಾಲುಃ ಆರೋಪಿ ಪರ ವಕೀಲರವರಿಂದಃ

ಮಹಜರ್ ನಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಸಹಿ ಮಾಡು ಎಂಬ ಕಾರಣಕ್ಕೆ ಸಹಿ ಹಾಕಿದ್ದೇನೆ ಎಂದರೆ ಸರಿ. ಪೊಲೀಸರೇ ಲಾರಿಯಿಂದ ಅಪಘಾತ ಆಗಿದೆ ಎಂದು ನಮಗೆ ತಿಳಿಸಿದ್ದಾರೆ ಎಂದರೆ ಸರಿ, ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಆಗಿಲ್ಲ ಎಂದರ ಸರಿಯಲ್ಲ. ಮೃತ ವ್ಯಕ್ತಿ ನಮ್ಮ ಊರಿನವನೇ ಇರುವ ಕಾರಣ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ .

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.